# <u>ನಗರಸಭೆ, ಚಿಕ್ಕಮಗಳೂರು</u>

ದಿನಾಂಕ:24/02/2007 ರಂದು ಮಾನ್ಯ ಆಡಳಿತಾಧಿಕಾರಿಗಳ ಅಧ್ಯಕ್ಷತೆಯಲ್ಲಿ 1.00 ಘಂಟೆಗೆ ನಡೆದ ಕೆ.ಎಂ.ಆರ್.ಪಿ ಸಭೆಯ ನಡವಳಿಕೆಗಳು.

–:***:–:***:–:***:–

ಸಭೆಯ ಪ್ರಾರಂಭದಲ್ಲಿ ಪೌರಾಯುಕ್ತರು ಸ್ವಾಗತಿಸಿ ಮಾತನಾಡುತ್ತಾ, ಸಭೆಯನ್ನು ಕರೆದಿರುವ ಉದ್ದೇಶವನ್ನು ತಿಳಿಸುತ್ತಾ, ಕೆ.ಎಂ.ಆರ್.ಪಿ ಗೆ ಸಂಬಂಧಿಸಿದಂತೆ ಬೆಂಗಳೂರಿನ ಫೀಡ್‌ಬ್ಯಾಕ್ ಸಂಸ್ಥೆಯಿಂದ ಬಂದಿದ್ದ ಕೆ.ಎಂ.ಆರ್.ಪಿ ಸಿಬ್ಬಂಧಿ ಶ್ರೀ. ಶ್ರೀಧರ್, ಪ್ರಾಜೆಕ್ಟ ಕೋ ಅರ್ಡಿನೇಟರ್ ಹಾಗೂ ಶ್ರೀಮತಿ ರಜನಿ ಇವರನ್ನು ಸಭೆಯಲ್ಲಿ ಪರಿಚಯಿಸಿದರು.

ನಂತರ ಮಾತನಾಡುತ್ತಾ, ವರ್ಲ್ಡ್ ಬ್ಯಾಂಕ್‌ನಿಂದ ಚಿಕ್ಕಮಗಳೂರು ನಗರದ ಮೂಲಭೂತ ಸೌಲಭ್ಯಗಳನ್ನು ಅಭಿವೃದ್ಧಿಪಡಿಸಿ ನಾಗರೀಕರಿಗೆ ಉತ್ತಮ ಮೂಲಭೂತ ಸೌಲಭ್ಯಗಳನ್ನು ಒದಗಿಸಲು ಅನುದಾನ ಬಿಡುಗಡೆ ಮಾಡುವ ಬಗ್ಗೆ ತಿಳಿಸುತ್ತಾ, ಈ ಅನುದಾನ ಪಡೆಯಲು ನಗರಸಭೆಯು ಶೇ. 10 ರಷ್ಟು ಹಣ ಒದಗಿಸಬೇಕಾಗಿದ್ದು, ಈ ಹಣವನ್ನು ಹೇಗೆ ಯಾವ ಮೂಲಗಳಿಂದ ಕ್ರೋಢಿಕರಿಸಬೇಕು ಎಂಬ ಬಗ್ಗೆ ಸಲಹೆಗಳನ್ನು ನೀಡಬೇಕಾಗಿ ಕೋರಿದರು.

ನಂತರ ಫೀಡ್‌ಬ್ಯಾಂಕ್ ಸಂಸ್ಥೆಯ ಕೆ ಎಂ ಆರ್ ಪಿ ಸಿಬ್ಬಂಧಿ ಶ್ರೀಮತಿ ರಜನಿ ಇವರು ಮಾತನಾಡುತ್ತಾ, ತಾವು ಚಿಕ್ಕಮಗಳೂರು ನಗರದ ನಾಗರೀಕರ ಜೀವನ ಮಟ್ಟ ಇವರಿಗೆ ಒದಗಿಸಿರುವ ಮೂಲಭೂತ ಸೌಲಭ್ಯಗಳ ಬಗ್ಗೆ ಹಾಗೂ ಕೊಳಚೆ ಪ್ರದೇಶಗಳಲ್ಲಿ ವಾಸಿಸುತ್ತಿರುವ ಜನರ ಜೀವನ ಮಟ್ಟದ ಪರಿಶೀಲನೆ ಮಾಡಿ ವರದಿ ನೀಡಲು ಬಂದಿದ್ದು, ಸಭೆಯಲ್ಲಿರುವ ಎಲ್ಲಾ ನಾಗರೀಕರೂ ನಗರಸಭೆಯಿಂದ ಭರಿಸಬೇಕಾದ ಅನುದಾನಕ್ಕೆ ಕ್ರೋಢೀಕರಿಸುವ ಸಂಬಂಧ ಉತ್ತಮವಾದ ಸಲಹೆಗಳನ್ನು ನೀಡಬೇಕೆಂದು ಕೋರಿದರು.

ಶ್ರೀ ನಾಗೇಂದ್ರ, ರಚನಾ ಬಿಲ್ಡರ್ಸ್, ಚಿಕ್ಕಮಗಳೂರು ಇವರು ಮಾತನಾಡುತ್ತಾ, ವರ್ಲ್ಡ್ ಬ್ಯಾಂಕ್ ವತಿಯಿಂದ ಚಿಕ್ಕಮಗಳೂರು ನಗರದ ಅಭಿವೃದ್ಧಿಗಾಗಿ ಅನುದಾನ ನೀಡಲು ಮುಂದೆ ಬಂದಿರುವುದು ಬಹಳ ಸಂತೋಷದ ವಿಚಾರವಾಗಿದೆ ಎಂದು ಪ್ರತಿಕ್ರಿಯಿಸುತ್ತಾ ಒಳಚರಂಡಿ ವ್ಯವಸ್ಥೆ ಅಭಿವೃದ್ಧಿಗೆ ಶೇ. 90 ರಷ್ಟು ಅನುದಾನ ದೊರೆಯುತ್ತಿದ್ದು ಇದಕ್ಕೆ ಪ್ರತಿಯಾಗಿ ನಗರಸಭೆಯವರು ಶೇ 10 ರಷ್ಟು ಮೊತ್ತವನ್ನು ಕ್ರೋಢಿಕರಿಸಿ ನೀಡಲು ನಗರದ ಪ್ರತಿಯೊಬ್ಬ ನಾಗರೀಕರು ಮುಂದಾಗಬೇಕೆಂದು ತಿಳಿಸಿದರು. ಚಿಕ್ಕಮಗಳೂರು ನಗರದಲ್ಲಿ 5,000 ಜನ ಮಾತ್ರ ಯುಜಿಡಿ ಸಂಪರ್ಕ ಪಡೆದಿರುತ್ತಾರೆ. 10,200 ಜನ ಇನ್ನೂ ಯುಜಿಡಿ ಸಂಪರ್ಕ ಪಡೆಯದೇ ತ್ಯಾಜ್ಯವನ್ನು ಚರಂಡಿಗೆ ಬಿಡುತ್ತಿರುತ್ತಾರೆ. ಇಂತಹವರನ್ನು ಗುರುತಿಸಿ ಪ್ರತಿಯೊಬ್ಬರಿಗೂ ಯುಜಿಡಿ ಸಂಪರ್ಕ ಪಡೆಯುವುದನ್ನು ಕಡ್ಡಾಯಪಡಿಸಿ, ಒಬ್ಬರಿಂದ ರೂ. 2000-00 ಗಳಂತೆ ಹಿಂತಿರುಗಿಸಲಾಗದಂತಹ ಶುಲ್ಕ ನಿಗಧಿಪಡಿಸಿ ಒಟ್ಟಿಗೆ ಪಾವತಿಸಲು ಸಾಧ್ಯವಾಗದಿದ್ದಲ್ಲಿ 3-4 ಕಂತುಗಳಂತೆ ವಸೂಲಿ ಮಾಡಿದಲ್ಲಿ 5 ವರ್ಷಗಳಲ್ಲಿ ನಗರಸಭೆಗೆ ಅತೀ ಹೆಚ್ಚು ಆದಾಯ ಬರುತ್ತದೆಯೆಂದು, ವಿದ್ಯುಚ್ಛಕ್ತಿ ಮಂಡಳಿಯವರು ಹೊಸ ಕಟ್ಟಡಕ್ಕೆ ವಿದ್ಯುತ್ ಸಂಪರ್ಕ ಪಡೆಯಲು ಹೇಗೆ ಡಿಪಾಸಿಟ್ ಪಡೆಯುತ್ತಾರೆಯೋ ಅದೇ ರೀತಿ ನಗರಸಭೆಯಿಂದ ಹೊಸ ಕಟ್ಟಡಕ್ಕೆ ಯುಜಿಡಿ ಸಂಪರ್ಕ ನೀಡಲು 2 ರಿಂದ 5 ಸಾವಿರದವರೆಗೆ ಡಿಪಾಸಿಟ್

PDF Created with deskPDF PDF Writer - Trial :: http://www.docudesk.com

ಪಡೆಯಬೇಕು. ಈ ಹಣದಿಂದ ಇಡೀ ನಗರದ ನಾಗರೀಕರಿಗೆ ಮೂಲಭೂತ ಸೌಲಭ್ಯಗಳನ್ನು ಒದಗಿಸಲು ಸಾಧ್ಯವಾಗುತ್ತದೆ ಹಾಗೂ ವರ್ಲ್ಡ್ ಬ್ಯಾಂಕ್‌ನವರು ನೀಡುವ ಅನುದಾನಕ್ಕೆ ಪ್ರತಿಯಾಗಿ ನಗರಸಭೆಯವರೂ ಭರಿಸಬೇಕಾದ ಮೊತ್ತ ನಗರಸಭೆಗೆ ಬರುತ್ತದೆ ಎಂದು ಸಲಹೆ ನೀಡಿದರು.

ಶ್ರೀ. ಎಂ.ಎಲ್. ಮೂರ್ತಿ, ನಗರಾಭಿವೃದ್ಧಿ ಪ್ರಾಧಿಕಾರದ ಮಾಜಿ ಅಧ್ಯಕ್ಷರು ಮಾತನಾಡುತ್ತಾ, ಶ್ರೀ ನಾಗೇಂದ್ರ ರವರು ಉತ್ತಮ ಸಲಹೆ ನೀಡಿದ್ದಾರೆಂದು ಈ ಬಗ್ಗೆ ನಗರಸಭೆ ಕ್ರಮವಹಿಸಿದಲ್ಲಿ ಉತ್ತಮ ಫಲಿತಾಂಶ ಬರುತ್ತದೆ ಎಂದು ತಿಳಿಸಿದರು. ಬರುವ ಅನುದಾನ ಯುಜಿಡಿ ಸಮರ್ಪಕವಾಗಿ ನಿರ್ವಹಿಸಲು ಸಾಕಾಗುವುದಿಲ್ಲ ಎಂಬ ಪೌರಾಯುಕ್ತರ ಉತ್ತರಕ್ಕೆ ಮಾತನಾಡುತ್ತ ಈ ರೀತಿ ಯುಜಿಡಿ, ನೀರು ಸರಬರಾಜು ಸಂಪರ್ಕ, ವಿದ್ಯುತ್ ಸಂಪರ್ಕ ಇತರೆ ಮೂಲಭೂತ ಸೌಲಭ್ಯಗಳನ್ನು ನಗರದ ಜನರಿಗೆ ನೀಡುವಾಗ ಒಂದು ಪ್ರದೇಶವನ್ನು ಆಯ್ಕೆಮಾಡಿಕೊಂಡು ಒಂದು ಕಡೆಯಿಂದ 1ನೇಹಂತ, 2ನೇ ಹಂತ, 3ನೇ ಹಂತ ಈ ರೀತಿಯಾಗಿ ಒಂದು ಪ್ರದೇಶವನ್ನು ಹಂತಹಂತವಾಗಿ ಪ್ರತಿಯೊಂದು ಸೌಲಭ್ಯ ಒದಗಿಸಿ ಅಭಿವೃದ್ಧಿಪಡಿಸಬೇಕೆಂದು ತಿಳಿಸಿದರು. ಇಡೀ ನಗರಕ್ಕೆ ಯುಜಿಡಿ ಸೌಲಭ್ಯ ಒದಗಿಸಲು ೫೨ ಕೋಟಿ ಹಣ ಬೇಕಾಗಿದ್ದು, ವರ್ಲ್ಡ್ ಬ್ಯಾಂಕ್‌ನಿಂದ 28 ಕೋಟಿ ನೀಡಲು ಮುಂದೆ ಬಂದಿದ್ದು, ಉಳಿದ ಮೊತ್ತವನ್ನು ನಗರಸಭೆಯವರು ಭರಿಸಬೇಕಾಗಿದ್ದು, ನಗರದ ನಾಗರೀಕರ ಸಹಭಾಗಿತ್ವದಿಂದ ಈ ಮೊತ್ತವನ್ನು ಕ್ರೋಢಿಕರಿಸಬೇಕು ಹೊಸದಾಗಿ ನಿರ್ಮಾಣ ಮಾಡುವ ಕಟ್ಟಡಕ್ಕೆ ಯುಜಿಡಿ ಮೊತ್ತ 2 ರಿಂದ 3 ಸಾವಿರ ಶುಲ್ಕ ವಿಧಿಸಬೇಕು ಹಾಗೂ ಈಗಾಗಲೇ ಯುಜಿಡಿ ಸಂಪರ್ಕ ಪಡೆದಿರುವವರಿಂದ ಸರ್ವೀಸ್‌ಛಾರ್ಜ್ ಎಂದು ಒಬ್ಬರಿಂದ 500-00 ರಂತೆ ಶುಲ್ಕ ವಸೂಲಿ ಮಾಡಿದಲ್ಲಿ ಸಾಕಷ್ಟು ಆದಾಯ ನಗರಸಭೆಗೆ ಬರುತ್ತದೆ ಎಂದು ಸಲಹೆ ನೀಡಿದರು. ಮುಂದುವರಿದು ಈ ಕೆಲಸಕ್ಕೆ ಸ್ಥಳೀಯ ಚುನಾಯಿತ ಪ್ರತಿನಿಧಿಗಳ ಅನುದಾನವನ್ನು ಪಡೆಯಲು ಪ್ರಯತ್ನಿಸಬೇಕು ಎಂದು ತಿಳಿಸಿದರು.

ಶ್ರೀ. ರಾಧಾಕೃಷ್ಣ , ಸಂಚಾಲಕರು , ದಲಿತ ಸಂಘರ್ಷ ಸಮಿತಿ ಇವರು ಮಾತನಾಡುತ್ತಾ ನಗರದಲ್ಲಿನ (ಲೇಂಡಿ ತಲಾಬ್), ಶಾಂತಿನಗರ, ನಗರದ ಅತಿದೊಡ್ಡ ಕೊಳಚೆಪ್ರದೇಶವಾಗಿದ್ದು, ಇಲ್ಲಿ ಜನ ರಸ್ತೆ, ಚರಂಡಿಗಳ ಮೇಲೆ ಮನೆಗಳನ್ನು ನಿರ್ಮಿಸಿಕೊಂಡು ವಾಸಿಸುತ್ತಿದ್ದು ಇವರಿಗೆ ಯಾವುದೇ ಮೂಲಭೂತ ಸೌಲಭ್ಯಗಳನ್ನು ಈವರೆಗೂ ನಗರಸಭೆಯಿಂದ ಒದಗಿಸಿಲ್ಲ. ರಸ್ತೆ, ಚರಂಡಿ, ಬೀದಿದೀಪ ಇತರೆ ಸೌಲಭ್ಯಗಳಿಂದ ವಂಚಿತರಾಗಿ ಜೀವನ ನಡೆಸುತ್ತಿದ್ದು , ವರ್ಲ್ಡ್ ಬ್ಯಾಂಕ ವತಿಯಿಂದ ನೀಡುವ ಅನುದಾನದಲ್ಲಿ ಕೊಳಚೆಪ್ರದೇಶದ ಜನರ ಜೀವನ ಮಟ್ಟವನ್ನು ಸುಧಾರಿಸುವ ನಿಟ್ಟಿನಲ್ಲಿ ಕಾರ್ಯಕ್ರಮಗಳನ್ನು ಹಾಕಿಕೊಂಡು ಕಾರ್ಯಗತಗೊಳಿಸಬೇಕೆಂದು ಸಲಹೆ ನೀಡಿದರು.

ಶ್ರೀ. ಮಂಜುನಾಥಜೋಷಿ, ಖಜಾಂಚಿ, ಸ್ವಚ್ಛ ಟ್ರಸ್ಟ್, ಚಿಕ್ಕಮಗಳೂರು ಇವರು ಮಾತನಾಡುತ್ತಾ, ಕೆಲವು ನಾಗರೀಕರು ನಗರದ ಮುಖ್ಯರಸ್ತೆಗಳಲ್ಲಿ ಕಟ್ಟಡಗಳನ್ನು ಹೊಂದಿದ್ದು, ಕಟ್ಟಡದ ಹೆಚ್ಚಿನ ಭಾಗ ಕನ್ಸರ್‌ವೆನ್ಸಿ ರಸ್ತೆಯಲ್ಲಿದ್ದು ಮುಖ್ಯ ರಸ್ತೆಯಲ್ಲಿನ ಕಟ್ಟಡದ ಅರ್ಧಭಾಗಕ್ಕೆ ಒಂದು ಕಂದಾಯ, ಹಿಂದಿನ ಕನ್ಸರ್‌ವೆನ್ಸಿ ರಸ್ತೆಯಲ್ಲಿನ ಕಟ್ಟಡದ ಒಂದು ಭಾಗಕ್ಕೆ ಕಡಿಮೆ ಕಂದಾಯ ಈ ರೀತಿ ವಿಭಾಗ ಮಾಡಿ ಕಡಿಮೆ ಕಂದಾಯ ನಗರಸಭೆಗೆ ಪಾವತಿಸಿ ವಂಚಿಸುತ್ತಿದ್ದಾರೆಂದು ಇದನ್ನು ತಡೆಹಿಡಿದು ಇಂತಹವರನ್ನು ಗುರುತಿಸಿ ಕಂದಾಯ ವಸೂಲಿ ಮಾಡಿದಲ್ಲಿ ನಗರಸಭೆಗೆ ಹೆಚ್ಚಿನ ಆದಾಯ ಬರುತ್ತದೆ ಎಂದು ಸಲಹೆ ನೀಡಿದರು.

ಕೆ.ಎಂ.ಆರ್.ಪಿ ಅಧಿಕಾರಿಗಳು ಮಾತನಾಡುತ್ತಾ, ನಗರಸಭೆಯಿಂದ ಚಿಕ್ಕಮಗಳೂರು ಅಭಿವೃದ್ಧಿ ಸಪ್ತಾಹ ಎಂದು, ಆಂದೋಲನ ನಡೆಸಿ ಜನರಲ್ಲಿ ವರ್ಲ್ಡ್ ಬ್ಯಾಂಕ್‌ನಿಂದ ದೊರೆಯುವ ಅನುದಾನದಲ್ಲಿ ಕೈಗೊಳ್ಳುವ

PDF Created with deskPDF PDF Writer - Trial :: http://www.docudesk.com

ಅಭಿವೃದ್ಧಿ ಕಾರ್ಯಗಳ ಬಗ್ಗೆ ಹಾಗೂ ನಗರಸಭೆ ಇದಕ್ಕಾಗಿ ಭರಿಸಬೇಕಾದ ಮೊತ್ತ ಮರುಭರಿಸುವ ಬಗ್ಗೆ ಮಾಹಿತಿ ನೀಡಿ ಹೆಚ್ಚಿನ ಕಂದಾಯ  ಬರುವಂತೆ ಕ್ರಮವಹಿಸಬೇಕೆಂದು ಸಲಹೆ ನೀಡಿದರು.

ಮಾನ್ಯ ಶಾಸಕರು ಮಾತನಾಡುತ್ತಾ, ವರ್ಲ್ಡ್ ಬ್ಯಾಂಕ್‌ನಿಂದ ಬರುವ ಅನುದಾನಕ್ಕೆ ನಗರಸಭೆಯವರು ಭರಿಸಬೇಕಾಗಿರುವ ಮೊತ್ತಕ್ಕೆ ಶಾಸಕರ ನಿಧಿಯಿಂದ ಹಣ ಬಿಡುಗಡೆ ಮಾಡುವುದಾಗಿ ಹಾಗೂ ನಗರದ ಪ್ರತಿಯೊಂದು ವಾರ್ಡ್‌ಗಳಲ್ಲಿ ಜನಸಂಪರ್ಕ ಸಭೆ ನಡೆಸಿ ಆಯಾ ವಾರ್ಡ್‌ನ ಒಂದು ಸಂಘಕ್ಕೆ ಸಂಪನ್ಮೂಲ ಕ್ರೂಢೀಕರಿಸಿ ನೀಡುವ ಬಗ್ಗೆ ಜವಾಬ್ದಾರಿ ನೀಡಿ ಈ ರೀತಿ ಸಂಪನ್ಮೂಲ ಕ್ರೋಢೀಕರಿಸಬೇಕೆಂದು ಸಲಹೆ ನೀಡಿದರು. ಹಾಗೂ ಈ ಅಭಿವೃದ್ಧಿ ಕಾರ್ಯಗಳನ್ನು ಆಯಾ ವಾರ್ಡ್‌ನ ಜನರ ಮೇಲುಸ್ತುವಾರಿಯಲ್ಲಿ ಮಾಡುವುದಾಗಿ ತಿಳಿಸಿದರು.

ಸಾಮಿಲ್ಲು ಮಾಲೀಕರಿಂದ  ಭೂ ಪರಿವರ್ತನೆ ಫೀ ವಸೂಲಿ ಮಾಡಿ ಆದಾಯ ಹೆಚ್ಚಿಸಿ ಕೊಳ್ಳಲು ಸೂಚಿಸಿದರು ಹಾಗೂ ನಗರ ವ್ಯಾಪ್ತಿಯಲ್ಲಿ ಹಲವಾರು ಕನ್ಸರ್‌ವೆನ್ಸಿ ರಸ್ತೆಗಳನ್ನು ಒತ್ತುವರಿ ಮಾಡಿ ಉಪಯೋಗಿಸಿ ಕೊಳ್ಳುತ್ತಿರುವ ಮನೆ ಮಾಲೀಕರಿಂದ ಫೀ ವಸೂಲಿ ಮಾಡಿ ಖಾಯಂ ಮಾಡಿ ಕೊಟ್ಟಲ್ಲಿ ನಗರಸಭೆ ಆದಾಯ ಹೆಚ್ಚುವರಿ ಆಗುವುದಾಗಿ  ಅಭಿಪ್ರಾಯಿಸಿದರು.

ಅಂತಿಮವಾಗಿ ಆಡಳಿತಾಧಿಕಾರಿಗಳು ಮಾತನಾಡಿ ಸದ್ಯದಲ್ಲಿಯೇ ಒಂದು ಸಾರ್ವಜನಿಕ ಸಭೆ ಕರೆದು ಕೂಲಂಕುಷವಾಗಿ  ಚರ್ಚಿಸಿ ನಗರದ ಅಭಿವೃದ್ದಿಗೆ ಚಾಲನೆ ಮಾಡಲಾಗುವುದು,ಎಂದು ತಿಳಿಸುತ್ತಾ ಇದಕ್ಕೆ ಎಲ್ಲರ ಸಹಕಾರ ಕೋರಿದರು

ಪೌರ ಆಯುಕ್ತರು ವಂದನೆಗಳೊಂದಿಗೆ ಸಭೆಯನ್ನು ಮುಕ್ತಾಯಗೊಳಿಸಿದರು.

ಆಡಳಿತಾಧಿಕಾರಿಗಳು,
ನಗರಸಭೆ, ಚಿಕ್ಕಮಗಳೂರು.

PDF Created with deskPDF PDF Writer - Trial :: http://www.docudesk.com